# ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ಹುದ್ದೆಗೆ ಅರ್ಜಿ ಆಹ್ವಾನ

ಅಫಜಲಪುರ :2025-26ನೇ ಸಾಲಿನ ಅಫಜಲಪುರ ಶಿಶು ಅಭಿವೃದ್ಧಿ ಯೋಜನೆಯಲ್ಲಿ ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಹುದ್ದೆಗೆ ಅರ್ಜಿ ಆಹ್ವಾನ ಮಾಡಲಾಗಿದೆ. ಆಸಕ್ತರು ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಬಹುದು ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಪ್ರವೀಣ್ ಹೇರೂರ ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಅಫಜಲಪುರ ಶಿಶು ಅಭಿವೃದ್ಧಿ ಯೋಜನೆಯಲ್ಲಿ ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ -6 ಮತ್ತು ಸಹಾಯಕಿಯರ -35 ಹುದ್ದೆಗಳಿಗೆ ಮಹಿಳಾ ಅಭ್ಯರ್ಥಿಗಳು https://karnemakaone.kar.nic.in/abcd/ ಆನ್ಲೈನ್ ಮೂಲಕ ಮಾತ್ರ ಅರ್ಜಿಗಳನ್ನುಸಲ್ಲಿಸಲು ಸೂಚಿಸಲಾಗಿದೆ. ಅರ್ಜಿಗಳನ್ನುಸಲ್ಲಿಸಲು ಮಾರ್ಚ್ 16 ಸಾಯಂಕಾಲ 5:30ರೊಳಗಾಗಿ ಅರ್ಜಿ ಸಲ್ಲಿಸಬಹುದು.ಕಾರ್ಯಕರ್ತೆ ಹುದ್ದೆ:ಬಿಲ್ವಾಡ್(ಕೆ), ಘತ್ತರಗಾ-3, ಕರಜಗಿ-1, ಮಾತೋಳಿ-1, ಸಾಗನೂರ-2, ಶಿವಪುರ ಗ್ರಾಮದ ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗಳು ಖಾಲಿ ಇವೆ.ಸಹಾಯಕಿಯರ ಹುದ್ದೆ:ಅಳ್ಳಗಿ(ಬಿ)-1, ಆನೂರ-1, ಆನೂರ-3, ಅಂಜುಣಗಿ ತಾಂಡಾ -2,ಬಡದಾಳ-3,ಬಳೂರ್ಗಿ ತಾಂಡಾ -1,ಬಂದರವಾಡ-3,ಭೈರಾಮಡಗಿ-2, ಭೈರಾಮಡಗಿ-4, ಬೋಗನಳ್ಳಿ-1, ಚಿಣಮಗೇರಾ-1,ಚಿಣಮಗೇರಾ-3, ಗೌರ(ಕೆ)-1, ಹಳ್ಯಾಳ್ ತಾಂಡಾ, ಹವಳಗಾ-1,ಹೂಗಾರ ಬಡಾವಣೆ ಅಫಜಲಪುರ, ಇಂಗಳಗಿ(ಬಿ)-2, ಕೋಗನೂರ-4, ಮಾದಬಾಳ ತಾಂಡಾ, ಮದರಾ(ಬಿ)ತಾಂಡಾ, ಮಲ್ಲಾಬಾದ-3, ಮಲ್ಲಾಬಾದ-4, ಮಣ್ಣೂರ-2, ಮಾಶಾಳ-1,ಮಾಶಾಳ ಎಸ್.ಸಿ ಕಾಲೋನಿ -1,ಮಾತೋಳಿ-1,ರೇವಣಸಿದ್ದೇಶ್ವರ ಕಾಲೋನಿ ಅಫಜಲಪುರ,ಸಾಗನೂರ-1,ಸಂಗಾಪುರ -2,ಶೇಷಗಿರಿ-2,ಶಿವೂರ-3,ಸಿದ್ದೇಶ್ವರ ಕಾಲೋನಿ ಅಫಜಲಪುರ,ಸಿರಸಗಿ, ಉಸ್ಮಾನ ಕಾಲೋನಿ ಅಫಜಲಪುರ ಹೀಗೆ ಒಟ್ಟು35 ಅಂಗನವಾಡಿ ಕೇಂದ್ರಗಳಿಗೆ ಸಹಾಯಕಿಯರ ಹುದ್ದೆಗೆ ಅರ್ಜಿ ಆಹ್ವಾನ ಮಾಡಲಾಗಿದೆ.